MVC 921/2022 PW-1

**ದಿನಾಂಕ: 16-10-2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು: ಎದುರುದಾರರ ಪರ ವಕೀಲರಿಂದ:</u>**

1. ಮೃತ ಶೃತಿ ನನ್ನ ಸೊಸೆ. ಆ ದಿನ ನನ್ನ ಮಗ ಮತ್ತು ಸೊಸೆ ಹೋಗುತ್ತಿದ್ದ ಮೋಟಾರ್ ಸೈಕಲ್ ನನ್ನ ಮಗ ಜಯರಾಮ 3 ನೇ ಎದುರುದಾರನಿಗೆ ಸೇರಿದ್ದು. ಅಪಘಾತವಾದ ದಿನ ನನ್ನ ಮಗ ಮತ್ತು ಸೊಸೆ ತಿಪಟೂರಿಗೆ ಹೋಗುತ್ತಿದ್ದರು. ನನ್ನ ಮಗ ಮತ್ತು ಸೊಸೆ ಮನೆಯಿಂದ ಹೊಗಬೇಕಾದರೆ ಹೆಲ್ ಮೆಟ್ ಧರಿಸಿರಲಿಲ್ಲ ಎಂದರೆ ಸಾಕ್ಷಿಯು ನಾನು ನೋಡಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗನಿಗೆ ಚಾಲನಾ ಪರವಾನಗೆ ಇಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಗನ ವಿರುದ್ದ ಡಿಎಲ್ ಇಲ್ಲ ಎಂದು ದೋ.ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಮಗ ಮತ್ತು ಸೊಸೆ ಹೆಲ್ ಮೆಟ್ ಹಾಕದೆ ಅಜಾಗರೂಕತೆಯಿಂದ ಹೋಗುತ್ತಿದ್ದು , ಅವರೇ ಸ್ವತಃ ಬಿದ್ದ ಕಾರಣ ನನ್ನಸೊಸೆ ಮೃತ ಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

2. ನನ್ನ ಸೊಸೆಯ ಆಧಾರ್ ಕಾರ್ಡ್ ಇದೆ, ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅಪಘಾತದ ಸಮಯದಲ್ಲಿ ಮೃತಳಿಗೆ 36 ವರ್ಷ ವಯಸ್ಸಾದ ಕಾರಣ , ಸದರಿಯವರ ಆಧಾರ್ ಕಾರ್ಡ್ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೃತಳು ವ್ಯವಸಾಯದಿಂದ ತಿಂಗಳಿಗೆ 30 ಸಾವಿರ ಸಂಪಾದನೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಪರಿಹಾರಕ್ಕಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

MVC 921/2022 PW-1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.